ಸದನದಲ್ಲಿ ಉತ್ತರಿಸುವ
ಪ್ರಶ್ನೆಗಳ ಪಟ್ಟಿ
ಒಟ್ಟು ಪ್ರಶ್ನೆಗಳು – ೧೫

**ಪಟ್ಟಿ–೬**

# ಕರ್ನಾಟಕ ವಿಧಾನ ಪರಿಷತ್ತು

**ನೂರ ಮೂವತ್ತನೆಯ ಅಧಿವೇಶನ**

**(ಮುಂದುವರೆದ ಉಪವೇಶನ)**

**ಮಂಗಳವಾರ, ದಿನಾಂಕ: ೨೨ನೇ ಮಾರ್ಚ್, ೨೦೧೬**

---

**ಸಮೂಹ – II**

೧. ಇಂಧನ ಸಚಿವರು
೨. ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳು ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು
೩. ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರು
೪. ಲೋಕೋಪಯೋಗಿ ಸಚಿವರು
೫. ಸಹಕಾರ ಮತ್ತು ಸಕ್ಕರೆ ಸಚಿವರು
೬. ಕೃಷಿ ರಾಜ್ಯ ಸಚಿವರು
೭. ಪಶುಸಂಗೋಪನೆ ಮತ್ತು ರೇಷ್ಮೆ ರಾಜ್ಯ ಸಚಿವರು

---

## ರಾಷ್ಟ್ರೀಯ ಹೆದ್ದಾರಿಗಳನ್ನು ಮೇಲ್ದರ್ಜೆಗೇರಿಸುವ ಕುರಿತು

**ಶ್ರೀ ವಿ. ಸೋಮಣ್ಣ (ವಿಧಾನಸಭೆಯಿಂದ ಚುನಾಯಿತರಾದವರು)** –

೭೬ (೪೯೦) ಲೋಕೋಪಯೋಗಿ ಸಚಿವರು ಈ **ವಿಷಯಗಳನ್ನು ದಯವಿಟ್ಟು** ತಿಳಿಸುವರೆ –

(ಅ) ರಾಜ್ಯದಲ್ಲಿರುವ ಯಾವ ಯಾವ ರಾಷ್ಟ್ರೀಯ ಹೆದ್ದಾರಿಗಳನ್ನು ಮೇಲ್ದರ್ಜೆಗೇರಿಸಲು ಹಾಗೂ ರಸ್ತೆ ಉನ್ನತೀಕರಿಸಲು ಉದ್ದೇಶಿಸಲಾಗಿದೆ ; ಅವು ಯಾವುವು ;

(ಆ) ಈ ಪೈಕಿ ೪ ಲೈನ್, ೬ ಲೈನ್ ಹಾಗೂ ೮ ಲೈನ್ ಪಥದ ರಸ್ತೆಗಳು ಯಾವುವು ;

(ಇ) ಈ ಕಾಮಗಾರಿಗಳನ್ನು ಯಾವಾಗ ಕೈಗೆತ್ತಿಕೊಳ್ಳಲಾಗುವುದು ; ಯೋಜನೆ ಪೂರ್ಣಗೊಳಿಸಲು ಹಿಡಿಯುವ ಕಾಲಾವಧಿ ಎಷ್ಟು ;

(ಈ) ಇದಕ್ಕೆ ತಗಲುವ ಅಂದಾಜು ಮೊತ್ತ ಎಷ್ಟು ; ಯೋಜನೆ ಅನುಷ್ಠಾನಕ್ಕೆ ರಾಜ್ಯ ಹಾಗೂ ಕೇಂದ್ರ ಸರ್ಕಾರ ಒದಗಿಸುವ ಹಣ ಎಷ್ಟು ;

(ಉ) ಸದರಿ ರಸ್ತೆಗಳ ಕಾಮಗಾರಿ ಕೈಗೊಳ್ಳಲು ಯಾವ ಕಂಪನಿಗಳು ಮುಂದೆ ಬಂದಿವೆ : ಇದಕ್ಕೆ ಅನುಸರಿಸುವ ಮಾನದಂಡಗಳೇನು ? (ವಿವರ ಒದಗಿಸುವುದು)

## ಸಹಕಾರ ಸಂಘಗಳ ಮುಖಾಂತರ ರೈತರಿಗೆ ನೀಡಿರುವ ಸಾಲದ ಬಗ್ಗೆ

**ಶ್ರೀ ಎಸ್.ಎಸ್. ಬೋಸ್‌ರಾಜು** (ವಿಧಾನಸಭೆಯಿಂದ ಚುನಾಯಿತರಾದವರು) –

೭೭ (೬೭೯) ಸಹಕಾರ ಮತ್ತು ಸಕ್ಕರೆ ಸಚಿವರು ಈ ವಿಷಯಗಳನ್ನು ದಯವಿಟ್ಟು **ತಿಳಿಸುವರೆ** –

(ಅ) ರಾಯಚೂರು ಜಿಲ್ಲೆಗೆ ೨೦೧೫–೨೦೧೬ನೇ ಸಾಲಿನಲ್ಲಿ ಸಹಕಾರ ಸಂಘಗಳ ಮುಖಾಂತರ ರೈತರಿಗೆ ನೀಡಿರುವ ಸಾಲದ ಮೊತ್ತ ಎಷ್ಟು ;

(ಆ) ಅದರಲ್ಲಿ ಒಟ್ಟು ಸಾಲ ಎಷ್ಟು ;

(ಇ) ಬಡ್ಡಿ ರಹಿತ ಸಾಲ ಪಡೆದ ಫಲಾನುಭವಿಗಳೆಷ್ಟು ? (ವಿವರ ನೀಡುವುದು)

## ಬೆಸ್ಕಾಂ ಸಂಸ್ಥೆ ಆದಾಯ ಸೋರಿಕೆ

**ಶ್ರೀಮತಿ ತಾರಾಅನೂರಾಧ** (ನಾಮನಿರ್ದೇಶನ **ಹೊಂದಿದವರು**) –

೭೮ (೫೧೫) ಇಂಧನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಕಳೆದ ಮೂರು ವರ್ಷಗಳಲ್ಲಿ ಎಷ್ಟು ಕೈಗಾರಿಕೆಗಳಿಗೆ ಹೊಸದಾಗಿ ಮತ್ತು ಹೆಚ್ಚುವರಿ ವಿದ್ಯುತ್ (additional load) ಸಂಪರ್ಕಗಳನ್ನು ಕಲ್ಪಿಸಲಾಗಿದೆ ;

(ಆ) ಈ ಸಂಪರ್ಕಗಳಿಗೆ ನಿಗದಿಪಡಿಸಿರುವ ಅಭಿವೃದ್ಧಿ ಶುಲ್ಕ ಎಷ್ಟು ; ಪ್ರಸ್ತುತ ವಸೂಲಿ ಮಾಡುತ್ತಿರುವ ಶುಲ್ಕ ಎಷ್ಟು ;

(ಇ) ಬೆಸ್ಕಾಂ ಸಂಸ್ಥೆಯಿಂದ ಬೆಂಗಳೂರಿನ ಸುತ್ತಮುತ್ತಲಿನ ಕೈಗಾರಿಕಾ ಪ್ರದೇಶ ಮತ್ತು ನಗರದಲ್ಲಿರುವ ವಾಣಿಜ್ಯ ಕಟ್ಟಡಗಳಿಂದ ಕಳೆದ ಎರಡು ವರ್ಷಗಳಲ್ಲಿ ವಸೂಲು ಮಾಡಿ, ಜಮೆ ಮಾಡಲಾಗಿರುವ ಒಟ್ಟು ಅಭಿವೃದ್ಧಿ ಶುಲ್ಕ ಎಷ್ಟು; (ಪ್ರತ್ಯೇಕವಾದ ವಿವರ ನೀಡುವುದು)

(ಈ) ಅಭಿವೃದ್ಧಿ ಶುಲ್ಕವನ್ನು ಪಾವತಿಸದ ಕೈಗಾರಿಕೆಗಳು ಯಾವುವು ; ಇದರಿಂದ ಸರ್ಕಾರಕ್ಕೆ ಆದ ನಷ್ಟ ಎಷ್ಟು ; (ಪ್ರತ್ಯೇಕವಾಗಿ ಬಾಕಿ ಮೊತ್ತದ ವಿವರ ನೀಡುವುದು)

(ಉ) ಈ ನಿಟ್ಟಿನಲ್ಲಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು : ಅಭಿವೃದ್ಧಿ ಶುಲ್ಕವನ್ನು ನಿಗದಿತ ವೇಳೆಯಲ್ಲಿ ವಸೂಲು ಮಾಡದ ಅಧಿಕಾರಿಗಳ ಮೇಲೆ ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ ?

## ತೋಟಗಾರಿಕೆ ಅಭಿವೃದ್ಧಿ ಬಗ್ಗೆ

**ಶ್ರೀ ಬಸನಗೌಡ ಆರ್. ಪಾಟೀಲ್ (ಯತ್ನಾಳ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೭೯ (೫೧೭೬) ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಜ್ಯದ ಕಳೆದ ಐದು ವರ್ಷಗಳಲ್ಲಿ ತೋಟಗಾರಿಕೆಯ ಅಭಿವೃದ್ಧಿಗಾಗಿ ಆಯವ್ಯಯದಲ್ಲಿ ನಿಗದಿಪಡಿಸಿದ ಮೊತ್ತವೆಷ್ಟು ; (ವರ್ಷಾವಾರು ಹಾಗೂ ಜಿಲ್ಲಾವಾರು ವಿವರ ನೀಡುವುದು)

(ಆ) ಕಳೆದ ಐದು ವರ್ಷದಲ್ಲಿ ಯೋಜನೆ ಮತ್ತು ಯೋಜನೆಯೇತರ ಅಡಿಯಲ್ಲಿ ಒದಗಿಸಲಾದ ಮತ್ತು ಬಳಕೆಯಾದ ಮೊತ್ತವೆಷ್ಟು ;

(ಇ) ನಿಗದಿಪಡಿಸಿದ ಮೊತ್ತ ಸಂಪೂರ್ಣವಾಗಿ ಬಳಕೆಯಾಗಿದೆಯೇ ; ಬಳಕೆಯಾಗದಿದ್ದಲ್ಲಿ, ಕಾರಣಗಳೇನು ;

(ಈ) ರಾಜ್ಯದಲ್ಲಿ ಕಳೆದ ಐದು ವರ್ಷಗಳಲ್ಲಿ ತೋಟಗಾರಿಕೆ ಪ್ರದೇಶ ಎಷ್ಟು ವಿಸ್ತೀರ್ಣವಾಗಿದೆ ; ತೋಟಗಾರಿಕೆ ಬೆಳೆವಾರು ಮಾಹಿತಿ ನೀಡುವುದು ;

(ಉ) ರಾಜ್ಯದಲ್ಲಿ ತೋಟಗಾರಿಕೆ ಪ್ರದೇಶ ಹೆಚ್ಚು ಆಗುತ್ತಿದ್ದು ಆದರೆ ಆಯವ್ಯಯದಲ್ಲಿ ಅನುದಾನ ಮೊತ್ತ ಕಡಿಮೆಯಾಗುತ್ತಿದೆಯೇ : ಕಡಿಮೆಯಾಗಿದ್ದಲ್ಲಿ, ಕಾರಣಗಳೇನು? (ಸಂಪೂರ್ಣ ವಿವರ ನೀಡುವುದು)

## ಕೃಷಿ ಕ್ಷೇತ್ರದಲ್ಲಿ ಯುವಕರ ಆಸಕ್ತಿ ಹೆಚ್ಚಿಸುವ ಕುರಿತು

**ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ) –**

೮೦ (೬೮೨) ಕೃಷಿ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಕಳೆದ ೦೩ ವರ್ಷಗಳಲ್ಲಿ ರಾಜ್ಯದಲ್ಲಿ ಕೃಷಿ ಕ್ಷೇತ್ರದ ಉತ್ಪಾದನೆ ಎಷ್ಟು ; (ವಿವರ ನೀಡುವುದು)

(ಆ) ಕೃಷಿ ಕ್ಷೇತ್ರದಿಂದ ಯುವಕರು ವಿಮುಖರಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಕೃಷಿ ಕ್ಷೇತ್ರದತ್ತ ಯುವಕರ ಆಸಕ್ತಿ ಬೆಳೆಸಲು ಹಾಗೂ ಯುವಕರ ತೊಡಗಿಸುವಿಕೆಗೆ ಸರ್ಕಾರ ರೂಪಿಸಿರುವ ಯೋಜನೆಗಳು ಯಾವುವು ?

## ಪವರ್ ಸಬ್ಸಿಡಿ ನೀಡುವ ಕುರಿತು

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೮೧ (೬೩೭) ಇಂಧನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ -

(ಅ) ಶೇ.೧೦೦ ರಷ್ಟು ವಿದ್ಯುತ್ ಬಿಲ್ಲು ಪಾವತಿಸುವ ಗ್ರಾಮ ಪಂಚಾಯತ್‌ಗಳಿಗೆ "ಪವರ್ ಸಬ್ಸಿಡಿ" ನೀಡುವ ಬಗ್ಗೆ ಸರ್ಕಾರ ಆದೇಶ ಹೊರಡಿಸಿದೆಯೇ : (ಹೊರಡಿಸಿದ್ದಲ್ಲಿ, ಆದೇಶದ ಪ್ರತಿ ಒದಗಿಸುವುದು)

(ಆ) ಇದುವರೆಗೂ ಯಾವ ಯಾವ ಗ್ರಾಮ ಪಂಚಾಯತಿಗಳಿಗೆ ಪವರ್ ಸಬ್ಸಿಡಿ ಪ್ರೋತ್ಸಾಹ ಧನ ನೀಡಲಾಗಿದೆ ; (ಗ್ರಾಮ ಪಂಚಾಯತ್ ಹೆಸರು ಮತ್ತು ಪಾವತಿಸಿದ ಮೊತ್ತದ ವಿವರ ನೀಡುವುದು)

(ಇ) ಕಳೆದ ಮೂರು ವರ್ಷಗಳಲ್ಲಿ ಪ್ರತಿ ವರ್ಷಾಂತ್ಯಕ್ಕೆ ಶೇ.೧೦೦ ರಷ್ಟು ವಿದ್ಯುತ್ ಬಿಲ್ಲು ಪಾವತಿಸಿದ ಗ್ರಾಮ ಪಂಚಾಯತ್‌ಗಳು ಯಾವುವು ; (ಗ್ರಾಮ ಪಂಚಾಯತ್ ಹೆಸರು ಮತ್ತು ಪಾವತಿಸಿದ ಮೊತ್ತದ ವಿವರ ನೀಡುವುದು)

(ಈ) ಈಗಾಗಲೇ ಸರ್ಕಾರ ನೀಡಿದ ಭರವಸೆಯಂತೆ ವಿದ್ಯುತ್ ಬಿಲ್ಲು ಬಾಕಿಯಿರಿಸಿಕೊಳ್ಳದ ಗ್ರಾಮ ಪಂಚಾಯತ್‌ಗಳಿಗೆ ಪವರ್ ಸಬ್ಸಿಡಿ ಪ್ರೋತ್ಸಾಹ ಧನ ಬಿಡುಗಡೆ ಮಾಡುವ ಬಗ್ಗೆ ಮತ್ತು ಬಾಕಿ ಇರುವ ವಿದ್ಯುತ್ ಬಿಲ್ಲುಗಳ ಮೇಲಿನ ಬಡ್ಡಿ ಮನ್ನಾ ಮಾಡುವ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಳ್ಳಲಿದೆ ?

## ಕೃಷಿ ವಿಮಾ ಯೋಜನೆ ಬಗ್ಗೆ

**ಶ್ರೀ ಆರ್. ಚೌಡರೆಡ್ಡಿ ತೂಪಲ್ಲಿ (ಪದವೀಧರರ ಕ್ಷೇತ್ರ) –**

೮೨ (೬೬೨) ಕೃಷಿ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಷ್ಟ್ರೀಯ ಕೃಷಿ ವಿಮಾ ಯೋಜನೆಯನ್ನು ಯಾವಾಗಿನಿಂದ ಯಾರ ಸಹಯೋಗದಲ್ಲಿ ಜಾರಿಗೆ ತರಲಾಗಿದೆ ;

(ಆ) ಇದರಿಂದ ಪ್ರಯೋಜನ ಪಡೆದ ರೈತರ ಸಂಖ್ಯೆ ಎಷ್ಟು ; (ಜಿಲ್ಲಾವಾರು ಮಾಹಿತಿ ನೀಡುವುದು)

(ಇ) ಈ ಯೋಜನೆಗಾಗಿ ಸರ್ಕಾರ ೨೦೧೫–೧೬ನೇ ಸಾಲಿಗೆ ಎಷ್ಟು ಹಣ ಮೀಸಲಿಟ್ಟಿದೆ ;

(ಈ) ಆ ಪೈಕಿ ಖರ್ಚಾಗಿರುವ ಹಣ ಎಷ್ಟು ; ಬಾಕಿ ಉಳಿದ ಹಣ ಎಷ್ಟು ?

## ರಾಜ್ಯ ಹೆದ್ದಾರಿಗಳನ್ನು ಮೇಲ್ದರ್ಜೆಗೇರಿಸುವ ಬಗ್ಗೆ

**ಶ್ರೀ ಅಶ್ವತ್ ನಾರಾಯಣ (ವಿಧಾನಸಭೆಯಿಂದ ಚುನಾಯಿತರಾದವರು) –**

೮೩ (೬೭೫) ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಜ್ಯದಲ್ಲಿರುವ ರಾಜ್ಯ ಹೆದ್ದಾರಿಗಳನ್ನು ಮೇಲ್ದರ್ಜೆಗೇರಿಸಲು ಕೇಂದ್ರ ಭೂಸಾರಿಗೆ ಇಲಾಖೆ ಮಂಜೂರಾತಿ ನೀಡಿದೆಯೇ ; ಮೇಲ್ದರ್ಜೆಗೇರಿಸಲು ಗುರುತಿಸಿರುವ ರಸ್ತೆಗಳು ಯಾವುವು ; (ಜಿಲ್ಲಾವಾರು ಮಾಹಿತಿ ಒದಗಿಸುವುದು)

(ಆ) ಇದಕ್ಕಾಗಿ ಕೇಂದ್ರ ಸರ್ಕಾರದಿಂದ ಬಿಡುಗಡೆ ಮಾಡಿರುವ ಹಣವೆಷ್ಟು ;

(ಇ) ೨೦೧೪–೧೫ರಲ್ಲಿ ಕೇಂದ್ರ ಸರ್ಕಾರದಿಂದ ರಾಜ್ಯ ರಸ್ತೆ ಅಭಿವದ್ಧಿ ಹಾಗೂ ಇತರೆ ಅಭಿವೃದ್ಧಿಗಾಗಿ ರಾಜ್ಯಕ್ಕೆ ಬಿಡುಗಡೆ ಮಾಡಿರುವ ಹಣವೆಷ್ಟು ;

## ಹೊಸ ಪಟ್ಟಣ ಪಂಚಾಯಿತಿ ಮತ್ತು ಪುರಸಭೆಗಳ ಮೂಲಭೂತ ಸೌಕರ್ಯಗಳ ಕುರಿತು

**ಶ್ರೀ ಪ್ರಕಾಶ್ ಎಂ.ಕೆ.** (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –

**೮೪ (೬೪೮)** ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳು ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಜ್ಯದಲ್ಲಿ ಹೊಸದಾಗಿ ಘೋಷಿಸಿರುವ ಪಟ್ಟಣ ಪಂಚಾಯಿತಿ ಮತ್ತು ಪುರಸಭೆಗಳಿಗೆ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲು ಸರ್ಕಾರ ಕೈಗೊಂಡ ಕ್ರಮಗಳೇನು ;

(ಆ) ಹೊಸದಾಗಿ ಘೋಷಿಸಿರುವ ಪಟ್ಟಣ ಪಂಚಾಯಿತಿ ಮತ್ತು ಪುರಸಭೆಗಳಿಗೆ ೨೦೧೫–೨೦೧೬ನೇ ಸಾಲಿನಲ್ಲಿ ಮಂಜೂರಾದ ಅನುದಾನವೆಷ್ಟು ; ಪಂಚಾಯಿತಿ ಕಾರ್ಯಾಲಯಕ್ಕಾಗಿ ಸ್ವಂತ ಕಟ್ಟಡ ಮತ್ತು ಅಗತ್ಯ ಮೂಲಸೌಕರ್ಯಗಳನ್ನು ಯಾವ ಕಾಲಮಿತಿಯಲ್ಲಿ ಪೂರೈಸಲಾಗುವುದು ;

(ಇ) ಈ ಪಟ್ಟಣ ಪಂಚಾಯಿತಿ ಮತ್ತು ಪುರಸಭೆಗಳಲ್ಲಿ ಅವಶ್ಯವಿರುವ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಮುಂದಾಗಿದೆಯೇ ; ಹಾಗಿದ್ದರೆ ಈ ನಿಟ್ಟಿನಲ್ಲಿ ಏನು ಕ್ರಮ ಕೈಗೊಳ್ಳಲಾಗಿದೆ ; ಹಿರಿಯ ಇಂಜಿನಿಯರ್, ಕಿರಿಯ ಇಂಜಿನಿಯರ್, ಪ್ರಥಮ–ದರ್ಜೆ, ದ್ವಿತೀಯ–ದರ್ಜೆ, ಸಹಾಯಕ ಹುದ್ದೆಗಳು ಮತ್ತು ಡಿ–ದರ್ಜೆ ನೌಕರರನ್ನು ಯಾವ ಕಾಲ ಮಿತಿಯಲ್ಲಿ ಭರ್ತಿ ಮಾಡಲಾಗುವುದು : (ಮಾಹಿತಿ ನೀಡುವುದು)

(ಈ) ಚಿಕ್ಕಮಗಳೂರು ಜಿಲ್ಲೆಯಲ್ಲಿ ಒಟ್ಟು ಎಷ್ಟು ಪಟ್ಟಣ ಪಂಚಾಯಿತಿ ಮತ್ತು ಪುರಸಭೆಗಳನ್ನು ಘೋಷಿಸಲಾಗಿದೆ ; ಅವುಗಳಿಗೆ ಅಗತ್ಯವಿರುವ ಮೂಲಭೂತ ಸೌಕರ್ಯ, ಸ್ವಂತ ಕಟ್ಟಡ ಮತ್ತು ಸಿಬ್ಬಂದಿ ಕೊರತೆಯನ್ನು ಯಾವ ಕಾಲಮಿತಿಯಲ್ಲಿ ಪೂರೈಸಲಾಗುತ್ತದೆ ;

(ಉ) ಚಿಕ್ಕಮಗಳೂರು ಜಿಲ್ಲೆಯ ವ್ಯಾಪ್ತಿಯಲ್ಲಿ ಸ್ವಚ್ಛ ಭಾರತ ಯೋಜನೆಯಡಿ ಯಾವ ರೀತಿ ಕೆಲಸ ಕಾರ್ಯಗಳನ್ನು ಹಮ್ಮಿಕೊಳ್ಳಲಾಗಿದೆ ; ಇದಕ್ಕಾಗಿ ಜಿಲ್ಲೆಗೆ ಕಳೆದ ೨ ವರ್ಷಗಳಲ್ಲಿ ಬಿಡುಗಡೆ ಮಾಡಲಾದ ಅನುದಾನವೆಷ್ಟು ? (ವಿವರ ನೀಡುವುದು)

## ಎಲ್.ಇ.ಡಿ. ಬಲ್ಬ್‌ಗಳ ಬಗ್ಗೆ

**ಶ್ರೀಮತಿ ವಿಮಲಾಗೌಡ (ವಿಧಾನಸಭೆಯಿಂದ ಚುನಾಯಿತರಾದವರು) –**

೮೫ (೬೪೨) ಇಂಧನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಜ್ಯದಲ್ಲಿ ಸರ್ಕಾರ ಹೊಸ ಬೆಳಕು ಯೋಜನೆಯಡಿ ಇದುವರೆವಿಗೂ ವಿತರಣೆ ಮಾಡಿರುವ ಎಲ್.ಇ.ಡಿ. ಬಲ್ಬ್‌ಗಳ ಸಂಖ್ಯೆ ಎಷ್ಟು ; ಪ್ರತಿ ಬಲ್ಬ್‌ಗೆ ನಿಗದಿಪಡಿಸಿರುವ ದರವೆಷ್ಟು ;

(ಆ) ವಿದ್ಯುತ್ ಉಳಿತಾಯ ಮಾಡುವ ನಿಟ್ಟಿನಲ್ಲಿ ಎಲ್.ಇ.ಡಿ. ಬಲ್ಬ್‌ಗಳ ಬಳಕೆ ಪರಿಣಾಮಗಳ ಬಗ್ಗೆ ಸರ್ಕಾರ ಅಧ್ಯಯನಕ್ಕೆ ಒಳಪಡಿಸಲಾಗಿದೆಯೇ ;

(ಇ) ಇಲ್ಲದಿದ್ದರೆ, ಕಾರಣಗಳೇನು ;

(ಈ) ಈ ಎಲ್.ಇ.ಡಿ. ಬಲ್ಬ್‌ನಿಂದಾಗಿ ಮನುಷ್ಯನ ಕಣ್ಣಿನ ರೆಟಿನಾ ಮೇಲೆ ಸರಿಪಡಿಸಲಾಗದ ರೀತಿಯಲ್ಲಿ ಹಾನಿವುಂಟು ಮಾಡುವುದೆಂದು ಸರ್ಕಾರ ಮನಗಂಡಿದೆಯೇ ;

(ಉ) ಹಾಗಿದ್ದಲ್ಲಿ, ಸರ್ಕಾರ ಈ ಬಗ್ಗೆ ಯಾವ ರೀತಿಯ ಮುಂಜಾಗ್ರತಾ ಕ್ರಮಗಳನ್ನು ಕೈಗೊಂಡಿದೆ ?

**ಕಾಮಗಾರಿ ಟೆಂಡರ್ ಹಾಗೂ ತುಂಡು ಗುತ್ತಿಗೆಯಲ್ಲಿ ಡಿಪ್ಲೋಮಾ ಮತ್ತು ಇಂಜಿನಿಯರಿಂಗ್ ಪದವೀಧರರಿಗೆ ಪ್ರಾಶಸ್ತ್ಯ ನೀಡುವ ಬಗ್ಗೆ**

**ಶ್ರೀ ಅಮರನಾಥ ಪಾಟೀಲ್ (ಪದವೀಧರರ ಕ್ಷೇತ್ರ) –**

೮೬ (೬೫೩) ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಲೋಕೋಪಯೋಗಿ ಇಲಾಖೆಯಲ್ಲಿ ಕಾಮಗಾರಿಗಳ ಟೆಂಡರ್ ಪ್ರಕ್ರಿಯೆ ಹಾಗೂ ತುಂಡುಗುತ್ತಿಗೆಯಲ್ಲಿ ಡಿಪ್ಲೋಮಾ ಹಾಗೂ ಇಂಜಿನಿಯರಿಂಗ್ ಪದವೀಧರರಿಗೆ ವಿಶೇಷ ಪ್ರಾಶಸ್ತ್ಯ ಮೀಸಲಾತಿಗಳೇನಾದರೂ ಕಲ್ಪಿಸಲಾಗಿದೆಯೇ; (ಮಾಹಿತಿ ನೀಡುವುದು)

(ಆ) ಸದರಿ ಟೆಂಡರ್ ಪ್ರಕ್ರಿಯೆ ಹಾಗೂ ತುಂಡು ಗುತ್ತಿಗೆ ಕಾಮಗಾರಿಗಳಲ್ಲಿ ಡಿಪ್ಲೋಮಾ ಹಾಗೂ ಇಂಜಿನಿಯರಿಂಗ್ ಪದವೀಧರರಿಗೆ ಪ್ರಾಶಸ್ತ್ಯ/ ಮೀಸಲಾತಿಯನ್ನು ಇಲಾಖೆಯಲ್ಲಿ ನೀಡಲಾಗಿದೆಯೇ ; (ನೀಡಲಾಗಿದ್ದರೆ, ವಿವರ ನೀಡುವುದು)

(ಇ) ಹೈದರಾಬಾದ್–ಕರ್ನಾಟಕ ಪ್ರದೇಶದಲ್ಲಿ ಕಳೆದ ೦೩ ವರ್ಷಗಳಲ್ಲಿ ಕೈಗೊಂಡ ಕಾಮಗಾರಿಗಳ ಸಂಖ್ಯೆ ಎಷ್ಟು ; ತುಂಡು ಗುತ್ತಿಗೆ ಹಾಗೂ ಟೆಂಡರ್‌ವಾರು ಸಂಖ್ಯೆಗಳ ಸಂಪೂರ್ಣ ಮಾಹಿತಿ ನೀಡುವುದು ; ಇದರಲ್ಲಿ ಡಿಪ್ಲೋಮಾ ಹಾಗೂ ಇಂಜಿನಿಯರಿಂಗ್ ಪದವೀಧರರು ಕೈಗೊಂಡಂತಹ ಕಾಮಗಾರಿಗಳ ಸಂಖ್ಯೆ ಎಷ್ಟು ?

**ಗೋ ರಕ್ಷಣಾ ಆಯೋಗವನ್ನು ಸ್ಥಾಪಿಸುವ ಬಗ್ಗೆ**

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ) –**

೮೭ (೬೭೧) ಪಶುಸಂಗೋಪನೆ ಮತ್ತು ರೇಷ್ಮೆ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಗೋ ರಕ್ಷಣಾ ಆಯೋಗವನ್ನು ಕರ್ನಾಟಕದಲ್ಲಿ ಸ್ಥಾಪಿಸಲಾಗಿದೆಯೇ ;

(ಆ) ಹಾಗಿದ್ದಲ್ಲಿ, ಈ ಆಯೋಗವು ಕಾರ್ಯನಿರ್ವಹಿಸುತ್ತಿರುವ ಬಗ್ಗೆ ವಿವರ ನೀಡುವುದು ;

(ಇ) ಗೋ ರಕ್ಷಣೆ ಆಯೋಗದ ಅಧೀನ ಯಾವ ಯಾವ ಕಾರ್ಯಕ್ರಮಗಳನ್ನು ಹಾಕಿಕೊಳ್ಳಲಾಗಿದೆ ;

(ಈ) ಈ ಆಯೋಗದಡಿಯಲ್ಲಿ ಗೋ ತಳಿ ಅಭಿವೃದ್ಧಿಗಾಗಿ ಪಶುಸಂಗೋಪನಾ ಇಲಾಖೆಗಾಗಿ ಕೇಂದ್ರ ಸರ್ಕಾರದಿಂದ ಕಳೆದ ೩ ವರ್ಷಗಳಿಂದ ಬಿಡುಗಡೆಯಾದ ಹಾಗೂ ವೆಚ್ಚ ಮಾಡಲಾದ ಅನುದಾನದ ವಿವರವನ್ನು ನೀಡುವುದು ?

## ರಸ್ತೆ ಅಭಿವೃದ್ಧಿ ಕಾಮಗಾರಿಗಳು

**ಶ್ರೀ ಆರ್. ಧರ್ಮಸೇನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೮೮ (೬೨೯) ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ವ್ಯಾಪ್ತಿಯಲ್ಲಿ ಬರುವ ಲೋಕೋಪಯೋಗಿ ಇಲಾಖಾ ರಸ್ತೆಗಳಾವುವು ;

(ಆ) ೨೦೧೪–೧೫ರಲ್ಲಿ ಈ ಜಿಲ್ಲೆಗಳಿಗೆ ಒದಗಿಸಿರುವ ಅನುದಾನ ಎಷ್ಟು ; ಸದರಿ ಕಾಮಗಾರಿಗಳಿಗೆ ಖರ್ಚು ಮಾಡಿರುವ ಹಣ ಎಷ್ಟು ;

(ಇ) ಮೇಲ್ಕಂಡ ಜಿಲ್ಲೆಗಳಲ್ಲಿ ಲೋಕೋಪಯೋಗಿ ಇಲಾಖೆಯಿಂದ ಕೈಗೊಂಡಿರುವ ಅಭಿವೃದ್ಧಿ ಕಾಮಗಾರಿಗಳು ಯಾವುವು ; ಇದಕ್ಕಾಗಿ ಖರ್ಚು ಮಾಡಿರುವ ಹಣವೆಷ್ಟು ? (ಕಾಮಗಾರಿವಾರು ಪ್ರಗತಿಯ ವಿವರ ನೀಡುವುದು)

## ರೈತರಿಗೆ ಕೃಷಿ ಮಾರುಕಟ್ಟೆ ಸೌಲಭ್ಯಗಳು

**ಶ್ರೀ ವಿಜಯಸಿಂಗ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೮೯ (೬೭೨) ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಬೀದರ್ ಜಿಲ್ಲೆಯಲ್ಲಿರುವ ಕೃಷಿ ಮಾರುಕಟ್ಟೆಗಳೆಷ್ಟು ; ಎಲ್ಲೆಲ್ಲಿ ಮತ್ತು ಯಾವುವು;

(ಆ) ಅತಿ ಹೆಚ್ಚು ಆದಾಯ ತರುತ್ತಿರುವ ಮಾರುಕಟ್ಟೆಗಳಾವುವು ; ಯಾವುದೇ ವಹಿವಾಟು ನಡೆಯದಿರುವ ಮಾರುಕಟ್ಟೆಗಳು ಇವೆಯೇ ; ಇದ್ದಲ್ಲಿ, ಅವು ಯಾವುವು ;

(ಇ) ಪ್ರತಿಯೊಂದು ಮಾರುಕಟ್ಟೆ ಆವರಣದಲ್ಲಿ ರೈತರಿಗೆ ಸಿಗುವ ಮೂಲಸೌಲಭ್ಯಗಳೇನು ? (ವಿವರ ನೀಡುವುದು)

## ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಕೃಷಿ ಪತ್ತಿನ ಸಹಕಾರ ಸಂಘಗಳ ಕುರಿತು

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೯೦ (೫೧೧೦) ಸಹಕಾರ ಮತ್ತು ಸಕ್ಕರೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಕೃಷಿ ಪತ್ತಿನ ಸಹಕಾರ ಸಂಘಗಳ ಸಂಖ್ಯೆ ಎಷ್ಟು ; ಮತ್ತು ಯಾವುವು ; (ತಾಲ್ಲೂಕುವಾರು ವಿವರ ನೀಡುವುದು)

(ಆ) ರೈತರಿಗೋಸ್ಕರ ಪ್ರಾರಂಭಿಸಲ್ಪಟ್ಟ ರೈತರ ಭಾವನೆಗಳಿಗೆ ಸ್ಪಂದಿಸುವ ಕೃಷಿ ಪತ್ತಿನ ಸಹಕಾರ ಸಂಘಗಳಲ್ಲಿನ ಉದ್ಯೋಗವಕಾಶದಲ್ಲಿ ಕನಿಷ್ಠ ಪಕ್ಷ ೭೦% ರಷ್ಟನ್ನು ರೈತರ ಮಕ್ಕಳಿಗೆ ನೀಡುವ ಯೋಜನೆ ಸರ್ಕಾರದ ಮುಂದಿದೆಯೇ; ಇಲ್ಲವಾದಲ್ಲಿ, ಕಾರಣವೇನು ;

(ಇ) ಉಡುಪಿ ಜಿಲ್ಲೆಯಲ್ಲಿನ ಕೃಷಿ ಪತ್ತಿನ ಸಹಕಾರ ಸಂಘಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ನಿರ್ದೇಶಕರು ಹಾಗೂ ಸಿಬ್ಬಂದಿಗಳ ಮೇಲೆ ಹಣ ದುರುಪಯೋಗ ಹಾಗೂ ಆರ್ಥಿಕ ನಷ್ಟದ ವಿರುದ್ಧ ದಾಖಲಾದ ಪ್ರಕರಣಗಳು ಎಷ್ಟು ; ಮತ್ತು ಯಾವುವು ? (ಸಂಸ್ಥೆವಾರು, ಪ್ರಕರಣವಾರು, ನಿರ್ದೇಶಕರು ಹಾಗೂ ಸಿಬ್ಬಂದಿಗಳ ಹೆಸರು, ವಿಳಾಸದೊಂದಿಗೆ ವಿವರ ನೀಡುವುದು)

**ವಿ. ಶ್ರೀಶ್**
ಕಾರ್ಯದರ್ಶಿ
ಕರ್ನಾಟಕ ವಿಧಾನ ಪರಿಷತ್ತು

ಸರ್ಕಾರಿ ಮುದ್ರಣಾಲಯ, ವಿಕಾಸಸೌಧ, ಬೆಂಗಳೂರು, ಪಿ7, ಕಾ.ಸೂ. , ಪ್ರತಿಗಳು 1500